ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) 1997-98ರ ಅವಧಿಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ 175 ಮನೆಗಳ ಭೌತಿಕ ಗುರಿ ಹಾಗೂ ರೂ. 35.00 ಲಕ್ಷಗಳ ಆರ್ಥಿಕ ಗುರಿ ನಿಗದಿಪಡಿಸಲಾಗಿದೆ. ಹಾಗೂ ಹೆಚ್ಚುವರಿಯಾಗಿ 200 ಮನೆಗಳ ಭೌತಿಕ ಗುರಿ ಮತ್ತು ರೂ. 40.00 ಲಕ್ಷಗಳ ಆರ್ಥಿಕ ಗುರಿ (ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 100 ಮನೆಗಳನ್ನು ನಿಗದಿಪಡಿಸಿರುವಂತೆ ಕುಂದಾಪುರಕ್ಕೆ ಗುರಿ ನಿಗದಿಪಡಿಸಲಾಗಿದೆ.

ಆ) 175 ಮನೆಗಳ ಪೈಕಿ 20 ಮನೆಗಳ ನಿರ್ಮಾಣ ಕಾರ್ಯ ಮುಗಿದಿದ್ದು ಉಳಿದವು ನಿರ್ಮಾಣ ವಿವಿಧ ಹಂತದಲ್ಲಿರುತ್ತದೆ. ಇದಕ್ಕಾಗಿ ರೂ. 14.00 ಲಕ್ಷ ಬಿಡುಗಡೆ ಮಾಡಿದ್ದು, ಅದು ಸಂಪೂರ್ಣ ವೆಚ್ಚವಾಗಿರುತ್ತದೆ. ಉಳಿದ 200 ಮನೆಗಳನ್ನು (ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 100 ಮನೆಗಳಂತೆ) ಹಂಚಿಕೆ ಮಾಡಿರುವುದಕ್ಕೆ ಫಲಾನುಭವಿಗಳ ಆಯ್ಕೆ ಕಾರ್ಯ ಪ್ರಗತಿಯಲ್ಲಿದ್ದು, 40.00 ಲಕ್ಷಗಳನ್ನು ಹುಡ್ಕೋದಿಂದ ಸಾಲ ಪಡೆದು ಬಿಡುಗಡೆ ಮಾಡಲಾಗುವುದು.

ಮಂಗಳೂರು ತಾಲ್ಲೂಕಿನಲ್ಲಿ ವಸತಿ ಮತ್ತು ನಿವೇಶನ ರಹಿತರು

124 (186) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕಿನಲ್ಲಿರುವ ವಸತಿ ಮತ್ತು ನಿವೇಶನ ರಹಿತರ ಸಂಖ್ಯೆ ಎಷ್ಟು?

ಆ) ಇವರಿಗೆ ವಸತಿ ಮತ್ತು ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) ವಸತಿ ರಹಿತರ ಸಂಖ್ಯೆ ನಿವೇಶನ ರಹಿತರ ಸಂಖ್ಯೆ

2253 5311

ಆ) ಇವರಿಗೆ ವಸತಿ ಮತ್ತು ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರದ ಆದೇಶ ಸಂಖ್ಯೆ:ವಇ 71 ಹೆಚ್ಎಹೆಚ್ 96 (ಭಾ) ದಿನಾಂಕ:3-3-97 ಮತ್ತು ದಿನಾಂಕ:6-10-97ರ ಪ್ರಕಾರ ತಾಲ್ಲೂಕು ಮಟ್ಟದ ವಸತಿ ಸಮಿತಿಯನ್ನು ರಚಿಸಲಾಗಿದೆ. ತಾಲ್ಲೂಕು ಮಟ್ಟದ ವಸತಿ ಸಮಿತಿಯು ದಿನಾಂಕ:8-10-97ರ ಸಮಿತಿಯಲ್ಲಿ ಈ ಕೆಳಕಂಡ ವಸತಿಗಳನ್ನು ಹಂಚಿಕೆ ಮಾಡಲಾಗಿದೆ.

1997-98ನೇ ಸಾಲಿನಲ್ಲಿ ಆಶ್ರಯ ಯೋಜನೆಯಲ್ಲಿ 375 ಮನೆಗಳನ್ನು ಇಂದಿರಾ ಆವಾಸ್ ಯೋಜನೆಯಲ್ಲಿ 103 ಮನೆಗಳನ್ನು ಹಾಗೂ ಅಂಬೇಡ್ಕರ್ ಯೋಜನೆಯಲ್ಲಿ 84 ಮನೆಗಳನ್ನು ಮಂಜೂರು ಮಾಡಲಾಗಿದೆ.

1995-96 ಮತ್ತು 1996-97ನೇ ಸಾಲುಗಳಲ್ಲಿ ಆಶ್ರಯ ಯೋಜನೆಯಲ್ಲಿ 661 ಮನೆಗಳನ್ನು ಇಂದಿರಾ ಆವಾಸ್ ಯೋಜನೆಯಲ್ಲಿ 420 ಮನೆಗಳನ್ನು ಹಾಗೂ ಅಂಬೇಡ್ಕರ್ ಯೋಜನೆಯಲ್ಲಿ 277 ಮನೆಗಳನ್ನು ಮಂಜೂರು ಮಾಡಲಾಗಿದೆ.

1197-98ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಯುಡಿ 256 ಕೆಎಫ್‌ತಿ 93, ದಿನಾಂಕ:21-1-94ರ ಆದೇಶದ ಪ್ರಕಾರ ಮಂಗಳೂರು ಗ್ರಾಮಾಂತರ ಪ್ರದೇಶದಲ್ಲಿ 110.26 ಎಕರೆ ಸರ್ಕಾರಿ ಜಮೀನನ್ನು ತಹಶೀಲ್ದಾರರಿಂದ ಸ್ವಾಧೀನ ಪಡೆದು 1084 ನಿವೇಶನಗಳನ್ನು ರಚಿಸಿ ಹಕ್ಕು ಪತ್ರ ನೀಡಲಾಗಿದೆ. ಉಳಿದ ವಿಸ್ತೀರ್ಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ವಿಶೇಷ ಘಟಕ ಯೋಜನೆಯ ಮನೆಗಳು

125 (13) ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಈ ವರ್ಷ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)?

ಆ) ಕ್ಷೇತ್ರವಾರು ಮಂಜೂರು ಮಾಡುವಾಗ ಪರಿಗಣಿಸಿದ ಅಳತೆಗೋಲು ಏನು; ಇದರಲ್ಲಿ ಏನಾದರೂ ತಾರತಮ್ಯ ಇದೆಯೇ?

ಇ) ಈ ತಾರತಮ್ಯ ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) ಪ್ರಸಕ್ತ ಸಾಲಿನಲ್ಲಿ ಆಶ್ರಯ ಗ್ರಾಮೀಣ ವಸತಿ ಕಾರ್ಯಕ್ರಮದಡಿಯಲ್ಲಿ ಶೇ. 25 ರಷ್ಟು ವಿಶೇಷ ಘಟಕ ಯೋಜನೆಯಲ್ಲಿ, ರಾಜ್ಯದ ಒಟ್ಟು ಗುರಿಯಲ್ಲಿ ಶೇಕಡ 25ರಷ್ಟು ಅಂದರೆ 7656 ಮನೆಗಳನ್ನು ನೀಡಲಾಗಿದೆ. ಗುರಿಯನ್ನು ವಿಧಾನಸಭಾ ಕ್ಷೇತ್ರವಾರು ನೀಡಿರುವುದಿಲ್ಲ. ಪ್ರತಿ ತಾಲ್ಲೂಕಿಗೆ 175 ಮನೆಗಳಂತೆ ಒಟ್ಟು ಗುರಿ ನೀಡಲಾಗಿದೆ.

ಆ) ವಿಧಾನಸಭೆ ಕ್ಷೇತ್ರವಾರು ಗುರಿಯನ್ನು ನೀಡಿರುವುದಿಲ್ಲ. ಆದರೆ ತಾಲ್ಲೂಕುವಾರು ಗುರಿಯನ್ನು ನೀಡಲಾಗಿದೆ. ಪ್ರತಿ ತಾಲ್ಲೂಕಿಗೆ ಸರಿಸಮಾನವಾಗಿ ಗುರಿಯನ್ನು ನೀಡಲಾಗಿದೆ. (ತಲಾ 175 ಮನೆಗಳಂತೆ) 2708 ಮನೆಗಳನ್ನು ಸ್ಥಳೀಯ ಬೇಡಿಕೆ, ಅಗತ್ಯತೆ ಆಧಾರದ ಮೇಲೆ ಹೆಚ್ಚುವರಿಯಾಗಿ 24 ತಾಲ್ಲೂಕುಗಳಿಗೆ 100 ರಿಂದ 200 ರವರೆಗೆ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.